ಆಯುಕ್ತರು
ಕಾರ್ಮಿಕ ಇಲಾಖೆ

ಕರ್ನಾಟಕ ಸರ್ಕಾರ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ಕಛೇರಿ:080 2975 3078
ಇಮೇಲ್ : labour.commissioner42@gmail.com

ಸಂಖ್ಯೆ: ಕೆಎಸ್‌ಸಿಎಲ್‌ಇಪಿಎಸ್/ಸಿಎಎಲ್–04/ಸಿಆರ್–16/2023–24 ದಿನಾಂಕ:01 .08.2023

## :ಕಛೇರಿ ಆದೇಶ:

**ವಿಷಯ:** ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಮತ್ತು ಸರ್ಕಲ್‌ಗಳಲ್ಲಿ, ರಸ್ತೆ ಬದಿಗಳಲ್ಲಿ ಬಿಕ್ಷೆ ಬೇಡುವ ಹಾಗೂ ಪೆನ್ನು, ಪೆನ್ಸಿಲ್‌ಗಳನ್ನು ಮಾರಾಟ ಮಾಡುವ ಮಕ್ಕಳನ್ನು ರಕ್ಷಿಸುವ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು.

**ಉಲ್ಲೇಖ:**
1. ಈ ಕಛೇರಿ ಪತ್ರ ಸಂಖ್ಯೆ:ಜಂಕಾಆ/ಸಿಎಎಲ್/ಸಿಆರ್–16/2017–18, ದಿನಾಂಕ:17.08.2017.
2. ಈ ಕಛೇರಿ ಪತ್ರ ಸಂಖ್ಯೆ:ಜಂಕಾಆ/ಸಿಎಎಲ್/ಸಿಆರ್–28/2017–18, ದಿನಾಂಕ:28.04.2018.
3. ಈ ಕಛೇರಿ ಪತ್ರ ಸಂಖ್ಯೆ: ಕೆಎಸ್‌ಸಿಎಲ್‌ಇಪಿಎಸ್/ಸಿಎಎಲ್–05/ಸಿಆರ್–22/2022–23, ದಿನಾಂಕ:22.09.2022.
4. ಈ ಕಛೇರಿ ಪತ್ರ ಸಂಖ್ಯೆ: ಕೆಎಸ್‌ಸಿಎಲ್‌ಇಪಿಎಸ್/ಸಿಎಎಲ್–04/ಸಿಆರ್–03/2023–24, ದಿನಾಂಕ:06.06.2023.
5. ಈ ಕಛೇರಿ ಪತ್ರ ಸಂಖ್ಯೆ: ಕೆಎಸ್‌ಸಿಎಲ್‌ಇಪಿಎಸ್/ಸಿಎಎಲ್–07/ಸಿಆರ್–10/2023–24, ದಿನಾಂಕ:13.06.2023.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಮತ್ತು ಸರ್ಕಲ್‌ಗಳಲ್ಲಿ, ರಸ್ತೆ ಬದಿಗಳಲ್ಲಿ ಬಿಕ್ಷೆ ಬೇಡುವ ಹಾಗೂ ಪೆನ್ನು, ಪೆನ್ಸಿಲ್‌ಗಳನ್ನು ಮಾರಾಟ ಮಾಡುವ ಮಕ್ಕಳನ್ನು ರಕ್ಷಿಸುವ ಸಂಬಂಧ ಈಗಾಗಲೇ ಕಾರ್ಯಪಡೆ (Task Force)ಯನ್ನು ರಚಿಸಲಾಗಿದೆ ಹಾಗೂ ನಿರ್ದೇಶನವನ್ನು ಸಹ ನೀಡಲಾಗಿರುತ್ತದೆ. ಈ ವಿಷಯವನ್ನು ಮಾನ್ಯ ಕಾರ್ಮಿಕ ಸಚಿವರು, ಗಂಭೀರವಾಗಿ ಪರಿಗಣಿಸಿದ್ದು, ಉಲ್ಲೇಖ(1), (2), (3), (4) ಮತ್ತು (5)ರಲ್ಲಿ ನೀಡಿರುವ ನಿರ್ದೇಶನದನ್ವಯ ಜಿಲ್ಲೆಗಳಲ್ಲಿ ತಮ್ಮ ಕಾರ್ಯವ್ಯಾಪ್ತಿಗೆ ಬರುವ ಎಲ್ಲಾ ವೃತ್ತಗಳಲ್ಲಿ ಜನ–ಜಾಗೃತಿ ಕಾರ್ಯಕ್ರಮಗಳನ್ನು ಹಾಗೂ ತಪಾಸಣೆಗಳನ್ನು ಆಯೋಜಿಸುವುದು. ಸದರಿ ಕಾರ್ಯಕ್ರಮದ ಛಾಯಾಚಿತ್ರಗಳು ಹಾಗೂ ವೀಡಿಯೋಗಳನ್ನು ಮತ್ತು ವರದಿಗಳನ್ನು ಕೇಂದ್ರ ಕಛೇರಿಗೆ ಸಕಾಲದಲ್ಲಿ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದಲ್ಲದೆ ಪ್ರತಿಯೊಬ್ಬರೂ ತಮ್ಮ ಕಛೇರಿಯ **"Twitter"** ಖಾತೆಯನ್ನು ತೆರೆದು ಅದರಲ್ಲಿ ಕಾರ್ಯಕ್ರಮದ ಛಾಯಾಚಿತ್ರಗಳನ್ನು ಹಾಗೂ ವೀಡಿಯೋಗಳನ್ನು ತಪ್ಪದೇ ಅಪ್ಲೋಡ್ ಮಾಡಿ, ಮಾನ್ಯ ಕಾರ್ಮಿಕ ಸಚಿವರು, ಕಾರ್ಮಿಕ ಸಚಿವಾಲಯ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಕಛೇರಿಯ **"Twitter"** ಖಾತೆಗೆ ಟ್ಯಾಗ್ ಮಾಡಲು ಈ ಮೂಲಕ ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ನಿಗಧಿತ ದಿನಾಂಕಗಳಂದು ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಸಕಾಲದಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಆಯುಕ್ತರು
ಕಾರ್ಮಿಕ ಇಲಾಖೆ

**ಇವರಿಗೆ,**

1. ಎಲ್ಲಾ ಉಪ ಕಾರ್ಮಿಕ ಆಯುಕ್ತರು.
2. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು.
3. ಎಲ್ಲಾ ಕಾರ್ಮಿಕ ಅಧಿಕಾರಿಗಳು.